Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 102/2017

ಪ್ರಾ.ಸಾ. 6 ಚಾ.ಸಾ. 9

| | | |
|---|---|---|
| ಹೆಸರು | : | ಡಾ. ಸಂತೊಷ ರೆಡ್ಡಿ |
| ತಂದೆಯ ಹೆಸರು | : | ಶಾಂತಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವೈಧ್ಯಾದಿಕಾರಿ ತಾಲೂಕು ಆಸ್ಪತ್ರೆ ಸೇಡಂ |
| ವಾಸ | : | ಯಾದಗಿರಿ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 03-09-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನಾನು 2016 ರಿಂದ 2020ರ ವರೆಗೆ ವೈಧ್ಯಾದಿಕಾರಿಯಾಗಿ ಸಾ.ಆ.ಕೆ. ಸೈದಾಪೂರ ದಲ್ಲಿ ಕರ್ತವ್ಯ ನಿರ್ವಹಿಸಿರುತ್ತೆನೆ.

ದಿನಾಂಕ: 11-03-2017 ರಂದು ನಾನು ಕರ್ತವ್ಯದಲ್ಲಿದಾಗ ಮ: 2-15 ಕ್ಕೆ ಚಾಸಾ: 1 ಮರೆಮ್ಮ ರವರ ಅದೆ ದಿನ ಆದ ಹಲ್ಲೆಯ ಹಿನ್ನೆಲೆಯಿಲ್ಲಿ ನಮ್ಮ ಆಸ್ಪತ್ರೆಗೇ ಬಂದಿದ್ದು ನಾನು ಅವರನ್ನು ಪರಿಕ್ಷಿಸಿದಾಗ ಅವರ ಎಡ ಮೂಗ್ಗೆ ಮೆಲೆ 2★1 ಅಳತೆಯ ತರಚಿದೆ ಗಾಯ ಉಂಟಾಗಿತ್ತು. ನಾನು ಅದಕ್ಕೆ ಚಿಕಿತೆ ನಿಡಿರುತ್ತೆನೇ ಸದರಿ ಗಾಯ ಸಾಧಾರಣ ಸ್ವರುಪದಲ್ಲಿ ಇತ್ತು ಸಾಕ್ಷಿಗೆ ಕಡತದಲ್ಲಿನ ಗಾಯಂ ದೃಡಿಕರಣ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.6 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು.

2. ಅದೇ ದಿನ ಚಾಸಾ: 4 ಶಂಕ್ರಮ್ಮ ರವರು ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೇ ಬಂದಿದ್ದು ನಾನು ಅವರನ್ನು ಪರಿಕ್ಷಿಸಿದಾಗ ಅವರ ಎಡ ಭುಜದ ಮೆಲೆ ಎಡ ಸೊಂಟದ ಮೆಲೆ ನೊವು ಇರುವುದು ಕಂಡು ಬಂತು. ನಾನು ಅದಕ್ಕೆ ಚಿಕಿತೆ ನಿಡಿರುತ್ತೆನೇ ಸದರಿ ಗಾಯ ಸಾಧಾರಣ ಸ್ವರುಪದಲ್ಲಿ ಇತ್ತು ಸಾಕ್ಷಿಗೆ ಕಡತದಲ್ಲಿನ ಗಾಯದ ದೃಡಿಕರಣ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.7 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು.

**3.** ನಿಪಿ 6 ಮತ್ತು 7 ರಲ್ಲಿ ನಮೂದಿಸಿದ ಗಾಯಗಳು ಕೈಯಿಂದ ಹೊಡೆದು ಕಾಲಿನಿಂದ ಒದ್ದು ಕಲ್ಲಿ ನಿಂದ  ಹೊಡೆದರೆ ಉಂಟಾಗಬಹುದು.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿವಿ ವಕೀಲರಿಂದ</u>

3. ನಿಪಿ 6 ಮತ್ತು 7 ರಲ್ಲಿ ಚಾಸಾ 1 ಮತ್ತು 4 ರವರು ಗುರುತನ ಬಹಗ್ಗೆ ನಮೂದಿಸಿಲ್ಲ ಎಂದರೆ ಸರಿ. ಅವುಗಳಲ್ಲಿ ಒಳ ರೋಗಿ/ ಹೊರ ರೋಗಿ ಸಂಖ್ಯೆ, ಗಾಯಗಳ ಬಣ್ಣ ಮತ್ತು ಅವುಗಳ ಸಮಯ ಬರೆದಿಲ್ಲ ಎಂದದರೆ ಸರಿ. ಯಾವುದು ಗಟ್ಟಿ ವಸ್ತುವಿಗೆ ಕೈ ತಾಗಿದರೆ ನಿಪಿ 6 ರಲ್ಲಿ ನಮೂದಿಸಿದ ಗಾಯ ಉಂಟಾಗಬಹುದು ಎಂದರೆ ಸರಿ. ನಾನು ಚಾಸಾ 1 ಮತ್ತು 4 ರವರನ್ನು ಯಾರು ಕರೆದುಕೊಂಡು ಬಂದುರೆಂದು ನಮೂದಿಸಿಲ್ಲ ಎಂದರೆ ಸರಿ . ನಾನು ಈ ಪ್ರಕರಣದಲ್ಲಿ ಎಮ್ ಎಲ್ ಸಿ ನಿಡಿಲ್ಲ ಎಂದರೆ ಸರಿಯಲ್ಲ. ನಿಪಿ 7 ರಲ್ಲಿ ನಮೂದಿಸಿದ ಗಾಯ ಚಾಸಾ 4 ರವರು ನೊವು ಇದೆ ಎಂದು ಹೇಳಿದ್ದರಿಂದ ತಿಳಿಯಿತು ಎಂದರೆ ಸರಿ.

**4.** ದಿನಾಂಕಃ 11-03-2017 ರಂದು ನಾನು ಕರ್ತವ್ವ ದಲ್ಲಿದ್ದಾ ಗ ಮ 2-15 ಕ್ಕೆ ಚಾಸಾಃ 1 ವುರೆಮ್ಮ ರವರ ಅದೆ ದಿನ ಆದ ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೇ ಬಂದಿದ್ದು ನಾನು ಅವರನ್ನು ಪರಿಕ್ಷಿಸಿದಾಗ ಅವರ ಎಡ ಮೂಗ್ಗೆ ಮೆಲೆ 2★1 ಅಳತೆಯ ತರಚಿದ ಗಾಯ ಉಂಟಾಗಿತ್ತು. ನಾನು ಅದಕ್ಕೆ ಚಿಕಿತ್ಸೆ ನಿಡಿರುತ್ತೆನೇ ಸದರಿ ಗಾಯ ಸಾಧಾರಣ ಸ್ವರುಪದಲ್ಲಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**5.** ಅದೇ ದಿನ ಚಾಸಾಃ 4 ಶಂಕ್ರಮ್ಮ ರವರು ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೇ ಬಂದಿದ್ದು ನಾನು ಅವರನ್ನು ಪರಿಕ್ಷಿಸಿದಾಗ ಅವರ ಎಡ ಭುಜದ ಮೆಲೆ ಎಡ ಸೊಂಟದ ಮೆಲೆ ನೊವು ಇರುವುದು ಕಂಡು ಬಂತು. ನಾನು ಅದಕ್ಕೆ ಚಿಕಿತ್ಸೆ ನಿಡಿರುತ್ತೆನೇ ಸದರಿ ಗಾಯ ಸಾಧಾರಣ ಸ್ವರುಪದಲ್ಲಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**6.** ನಿಪಿ 6 ಮತ್ತು 7 ರಲ್ಲಿ ನಮೂದಿಸಿದ ಗಾಯಗಳು ಕೈಯಿಂದ ಹೊಡೆದು ಕಾಲಿನಿಂದ ಒದ್ದು ಕಲ್ಲಿ ನಿಂದ  ಹೊಡೆದರೆ ಉಂಟಾಗಬಹುದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 102/2017

ಪ್ರಾ.ಸಾ. 7 ಚಾ.ಸಾ. 11

| | | |
|---|---|---|
| ಹೆಸರು | : | ಉಮೇಶ |
| ತಂದೆಯ ಹೆಸರು | : | ಬಸಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಸಹಾಯಕ ಕಾರ್ಯನಿರ್ವಹಾಕ ಇಂಜಿನಿಯರ ಪಿ ಎಮ್ ಜೆ ಎಸ್ ವಾಯ್ ಸೇಡಂ |
| ವಾಸ | : | ಸೇಡಂ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 03-09-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನಾನು 2016 ರಿಂದ 2018 ರವರೆಗೆ ಯಾದಗಿರಿ ಲೋಕೋಪಯೋಗಿ ಇಲಾಖೆಯಲ್ಲಿ ಶಾಖಾಧಿಕಾರಿ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ನಾನು ಈ ಪ್ರಕರಣದಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ದಿನಾಂಕ: 28.03.2017 ರಂದು ಮಧ್ಯಾಹ್ನ 12-30 ಗಂಟೆಗೆ ಗುನ್ನೆ ಸ್ಥಳಕ್ಕೆ ಬೇಟಿಕೊಟ್ಟು ನಾಗರೆಡ್ಡಿ ಎ ಎಸ್ ಐ ಇವರು ತೋರಿಸಿದ ಮೇರೆಗೆ ಗುನ್ನೆ ಸ್ಥಳದ ನಕ್ಷೆಯನ್ನು ತಯಾರಿಸಿಕೊಟ್ಟಿರುತ್ತೇನೆ. ಆ ನಕ್ಷೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.8 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.8(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿವಿ ವಕೀಲರಿಂದ

3. ನಾನು ನಿ.ಪಿ.8 ರಲ್ಲಿ ನಾಗರೆಡ್ಡಿ ರವರ ಸಹಿ ತೆಗೆದುಕೊಂಡಿಲ್ಲ ಎಂದರೆ ಸರಿ. ನಾನು ನಿಪಿ 8 ನ್ನು ತಯಾರಿಸಿದ ಸ್ಥಳದಲ್ಲಿ ಖಾಲಿ ಜಾಗ ಇದ್ದವು ಎಂದರೆ ಸರಿ. ನಾನು ಘಟನಾ ಸ್ಥಳಕ್ಕೆ ಹೋಗದೆ ಕಛೇರಿಯಲ್ಲಿ ಕುಳಿತು ಪೊಲೀಸರ ಕೋರಿಕೆಯ ಮೇರೆಗೆ ನಕ್ಷೆ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:-ಇಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

Form No.4 (Civil)
Deposition
Sheets
(R.P.No.57)

## ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

### ಸ್ಪೆಷಲ್.ಸಿ. ಸಂಖ್ಯೆಃ 102/2017

ಫ್ರಾ.ಸಾ. 8 ಚಾ.ಸಾ. 6

| | | |
|---|---|---|
| ಹೆಸರು | : | ಸಾಬಮ್ಮ |
| ಗಂಡನ ಹೆಸರು | : | ಸಿದ್ದಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸ | : | ಬಳಿಚಕ್ರ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 03-09-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾ-1 ಮತ್ತು 4 ರವರ ಪರಿಚಯ ಇಲ್ಲ ಅವರು ಯಾವ ಜಾತಿಗೆ ಸೇರಿದವರು ಎಂದು ಗೊತ್ತಿಲ್ಲ ಆರೋಪಿತರು ಗೊತ್ತಿಲ್ಲ ಅವರು ಕಬ್ಬಲಿಗ ಜಾತಿಗೆ ಸೇರಿದವರು. ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ನನ್ನ ಸಮಕ್ಷಮ ಯಾವುದೆ ಪಂಚನಾಮೆ ಮಾಡಿಲ್ಲ. ಸಾಕ್ಷಿಗೆ ಕಡತದಲ್ಲಿನ ನಿಪಿ 2 ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ಹೆಬ್ಬೆಟ್ಟಿನ ಗುರುತು ನೋಡಿ ಗುರುತಿಸಿರುತ್ತಾರೆ.ನಿಪಿ 2 ರಲ್ಲಿರುವ ವಿಷಯ ಗೊತ್ತಿಲ್ಲ

( ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು. )

## ಪಾಟೀ ಸವಾಲು ವಿಶೇಷ ಸರಕಾರಿ ಅಭಿಯೋಜಕರಿಂದ

2. ನಾನು ಮೇಲೆ ನಮೂದಿಸಿದ ಹೆಸರು ----------------- ಅಂತಾ ಹೇಳಿ ಗಣಕೀಕರಣ ಮಾಡಿಸಿದ ಹೇಳಿಕೆ ನಿಜವಿರುತ್ತದೆ ಅಂತಾ ಈಗ ವಿವರವಾಗಿ ಓದಿ ಹೇಳಿದಂತೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.೨ ಎಂದು ಗುರುತಿಸಲಾಯಿತು. ಸದರಿ ಘಟನೆಗೆ ನಾನು ಪ್ರತ್ಯಕ್ಷ ದರ್ಶಿ ಎಂರೆ ಸರಿಯಲ್ಲ

3. ದಿಃ 12.03.2017 ರಂದು ಬೆಃ 9.00 ರಿಂದ 10.00 ವರೆಗೆ ನನ್ನನ್ನು ಮತ್ತು ಚಾಸಾ-3 ರವರನ್ನು ಬಳಿಚಕ್ರ ಗ್ರಾಮದ ಸರ್ವೇ ಸಂಃ 171/ಎ ಇಲ್ಲಿಗೆ ಕರೆಸಿದ್ದರು ಎಂದರೆ ಸರಿಯಲ್ಲ. ಅಲ್ಲಿ ಆರೋಪಿತರು ಮರೆಮ್ಮ ಮತ್ತು ಶಂಕ್ರಮ್ಮ ಇವರಿಗೆ ಹೊಡೆದ ಜಾಗದಲ್ಲಿ ಪೋಲೀಸರು ಪಂಚನಾಮೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಗುನ್ಹಾ ಜಾಗವನ್ನು ನಾನು ತೋರಿಸಿ ದ್ದೆನೆಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಪೋಲೀಸರು ಒಂದು ಕಲ್ಲನ್ನು ಮುಮಾ-1 ರಂತೆ ಅಮಾನತ್ತು ಮಾಡಿಕೊಂಡರು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಗುನ್ಹಾ ಜಾಗೆಯಲ್ಲಿ ನಿಪಿ-2 ರಂತೆ ಪಂಚನಾಮೆ ಮಾಡಿ ಮುಮಾ-1 ಕಲ್ಲನ್ನು ಅಮಾನತ್ತು ಮಾಡಿದ್ದರೂ ಕೂಡಾ ಘಟನೆ ಬಗ್ಗೆ ಎಲ್ಲಾ ವಿಚಾರ ಗೊತ್ತಿದ್ದರೂ ಕೂಡಾ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯಾ ಕೊಡುತ್ತಿದ್ದೇನೆಂದರೆ ಸರಿಯಲ್ಲ.

4. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

## ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎಸ್.ಎಸ್.ಪಿ. ವಕೀಲರಿಂದ

-ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.